ಇಂಡಿಯಾ ನ್ಯೂಸ್

ವಾಣಿಜ್ಯ ಬಳಕೆ ಸಿಲಿಂಡರ್ ದರ ಹೆಚ್ಚಳ, ಗೃಹ ಬಳಕೆದಾರರಿಗಿಲ್ಲ ಬಿಸಿ

ಮುಂಬಯಿ: ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ದರ 73.50 ರೂ. ಹೆಚ್ಚಳವಾಗಿದೆ. ಸಾಮಾನ್ಯವಾಗಿ ತೈಲ ಕಂಪನಿಗಳು ಪ್ರತಿ ತಿಂಗಳ ಮೊದಲ ದಿನ ಅಡುಗೆ ಅನಿಲದ ದರ ಪರಿಷ್ಕರಣೆ ಮಾಡುತ್ತವೆ. ಈ ತಿಂಗಳು 19 ಕೆ.ಜಿಯ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಮಾತ್ರ ಹೆಚ್ಚಿಸಲಾಗಿದ್ದು, 14.2 ಕೆ.ಜಿಯ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ದರವನ್ನು ಹೆಚ್ಚಿಸಿಲ್ಲ. ಹೀಗಾಗಿ ಸಾಮಾನ್ಯ ಜನ ಸ್ವಲ್ಪಮಟ್ಟಿಗೆ ನಿರಾಳರಾಗಿದ್ದಾರೆ. ವಾಣಿಜ್ಯ ಬಳಕೆ ಸಿಲಿಂಡರ್ ದರ ಈಗ ಮಹಾನಗರಗಳ ಪೈಕಿ ಚೆನ್ನೈನಲ್ಲಿ ಗರಿಷ್ಠ ಅಂದರೆ 1,761 ರೂ. ತಲುಪಿದೆ. ಇನ್ನು ಗೃಹ ಬಳಕೆ ಸಿಲಿಂಡರ್ ದರವನ್ನು ಕಳೆದ ತಿಂಗಳು 25.5 ರೂ. ಹೆಚ್ಚಿಸಲಾಗಿತ್ತು. ಈ ವರ್ಷದಲ್ಲಿ ಜನವರಿಯಿಂದ ಈವರೆಗೆ ಅಡುಗೆ ಅನಿಲ ಸಿಲಿಂಡರ್ ದರ 138 ರೂ. ಹೆಚ್ಚಳವಾಗಿದ್ದರೆ, ಕಳೆದ ಏಳು ವರ್ಷಗಳಲ್ಲಿ ಎಲ್‌ಪಿಜಿ ದರ ಬಹುತೇಕ ದುಪ್ಪಟ್ಟಾಗಿದೆ.

ಉದ್ಯೋಗಿ, ಕುಟುಂಬ ಬಿಟ್ಟು ಇತರರಿಗೆ ನೀಡುವ ಲಸಿಕೆ ವೆಚ್ಚ 'ಸಿಎಸ್‌ಆರ್'ಗೆ

ಹೊಸದಿಲ್ಲಿ: ಕಂಪನಿಗಳು ತಮ್ಮ ಉದ್ಯೋಗಿಗಳು ಮತ್ತು ಅವರ ಕುಟುಂಬಸ್ಥರ ಹೊರತಾಗಿ ಇತರರಿಗೆ ಕೋವಿಡ್ ನಿರೋಧಕ ಲಸಿಕೆಯ ವೆಚ್ಚ ಭರಿಸಿದಲ್ಲಿ, ಅದನ್ನು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ವೆಚ್ಚವೆಂದು ಪರಿಗಣಿಸಲಾಗುವುದು ಎಂದು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಸ್ಪಷ್ಟನೆ ನೀಡಿದೆ. ಕಳೆದ ವರ್ಷದ ಮಾರ್ಚ್‌ನಲ್ಲಿ ಸಚಿವಾಲಯವು ಕೊರೊನಾ ಲಸಿಕೆಗಳ ವೆಚ್ಚವನ್ನು ಸಿಎಸ್‌ಆರ್ ಕಾರ್ಯವೆಂದು ಪರಿಗಣಿಸಲಾಗುವುದು ಎಂದು ಸುತ್ತೋಲೆ ಹೊರಡಿಸಿತ್ತು. ಈಗ ಪರಿಷ್ಕೃತ ಆದೇಶ ಹೊರಡಿಸಿರುವ ಸಚಿವಾಲಯವು, ''ಕಂಪನಿಯು ಉದ್ಯೋಗಿಗಳು ಮತ್ತು ಅವರ ಕುಟುಂಬ ಸದಸ್ಯರಲ್ಲದೆ ಇತರರ ಲಸಿಕೆ ವೆಚ್ಚ ಭರಿಸಿದಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಸಮ್ಮುಖದಲ್ಲಿ ಭಾನುವಾರ ಬಿಜೆಪಿ ಸೇರಿದ್ದಾರೆ. ಈ ವರ್ಷದ ಆರಂಭದಲ್ಲಿ ಶಾಸಕ ರೂಪ್‌ಜ್ಯೋತಿ ಕುರ್ಮಿ ಕಾಂಗ್ರೆಸ್‌ನಿಂದ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಇಬ್ಬರ ಪಕ್ಷಾಂತರದಿಂದ 126 ಸದಸ್ಯ ಬಲದ ಅಸ್ಸಾಂ ವಿಧಾನಸಭೆಯಲ್ಲಿ ಕಾಂಗ್ರೆಸ್ ಬಲ 27ಕ್ಕೆ ಕುಸಿದಿದೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಾರಥ್ಯ ವಹಿಸಿದ ಪ್ರಧಾನಿ ನರೇಂದ್ರ ಮೋದಿ

ಇಂದಿನಿಂದ ಅಧಿಕೃತ ಕಾರ್ಯಾರಂಭ | ವರ್ಷದಲ್ಲಿ ಮೂರು ಮಹತ್ವದ ಸಭೆ

ಭಾರತಕ್ಕೆ ಭದ್ರತಾ ನಾಯಕತ್ವ

ಹೊಸದಿಲ್ಲಿ: ವಿಶ್ವಸಂಸ್ಥೆ ಭದ್ರತಾ ಮಂಡಳಿಗೆ (ಯುಎನ್ ಎಸ್‌ಸಿ) ಇದೇ ಮೊದಲ ಬಾರಿಗೆ ಭಾರತದ ಪ್ರಧಾನಿಯೊಬ್ಬರು ಅಧ್ಯಕ್ಷರಾಗಿದ್ದು, ಅವರ ನೇತೃತ್ವದಲ್ಲೇ ಮಂಡಳಿಯ ಮಹತ್ವದ ಸಭೆ ನಡೆಯಲಿದೆ. ನರೇಂದ್ರ ಮೋದಿ ಅವರು ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಈ ಹೆಗ್ಗಳಿಕೆಗೆ ಪಾತ್ರರಾದ ದೇಶದ ಮೊದಲ ಪ್ರಧಾನಿಯಾಗಿದ್ದಾರೆ.

ಆವರ್ತನ ಆಧಾರದ ಮೇಲೆ ಮಂಡಳಿಯ ಅಧ್ಯಕ್ಷತೆಯು ಸದಸ್ಯ ರಾಷ್ಟ್ರವಾದ ಭಾರತಕ್ಕೆ ಸಿಕ್ಕಿದೆ. ಆಗಸ್ಟ್ 1ರಿಂದ ಮುಂದಿನ ವರ್ಷದ ಜುಲೈ 31ರವರೆಗೆ ಭಾರತ ಈ ಹೊಣೆಯನ್ನು ನಿಭಾಯಿಸಲಿದೆ. ಆ.9ರಂದು ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ಮಂಡಳಿಯ ಮಹತ್ವದ ಸಭೆ ಜರುಗಲಿದೆ. ಕೊರೊನಾ ಸಾಂಕ್ರಾಮಿಕದ ಕಾರಣದಿಂದ ವರ್ಚ್ಯುಯಲ್ ಸಭೆ ನಡೆಯಲಿದೆ. ಭಾರತದ ಅಧ್ಯಕ್ಷತೆ ಅಧಿಕೃತವಾಗಿ ಆರಂಭವಾಗುವ ದಿನದಂದು ಅಂದರೆ ಸೋಮವಾರ (ಆ.2) ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿ ಟಿ.ಎಸ್. ತಿರುಮೂರ್ತಿ ಅವರು ಸುದ್ದಿಗೋಷ್ಠಿ ನಡೆಸಿ ಆಗಸ್ಟ್ ತಿಂಗಳ ಕಾರ್ಯಚಟುವಟಿಕೆ ಕುರಿತು ಮಾಹಿತಿ ಹಂಚಿಕೊಳ್ಳಲಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ವಿಶ್ವಸಂಸ್ಥೆಯಲ್ಲಿನ ಭಾರತದ ಮಾಜಿ ಪ್ರತಿನಿಧಿ ಸೈಯದ್ ಅಕ್ಬರುದ್ದೀನ್ ಅವರು, ''75 ವರ್ಷಗಳಲ್ಲೇ ಭಾರತದ ಪಾಲಿಗೆ ವಿಶ್ವಸಂಸ್ಥೆಯ 15 ಸದಸ್ಯರ ಮಂಡಳಿಯ ಅಧ್ಯಕ್ಷತೆ ಸಿಕ್ಕಿರುವುದು ಇದೇ ಮೊದಲ ಬಾರಿಯಾಗಿದೆ. ದೇಶದ ನಾಯಕತ್ವಕ್ಕೆ ಮುಂದಾಳತ್ವ ವಹಿಸುವ ಸಂಕಲ್ಪ ಮತ್ತು ಸಾಮರ್ಥ್ಯ ಇರುವುದನ್ನು ಇದು ಸಾಬೀತುಪಡಿಸುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು

ಫ್ರಾನ್ಸ್‌ಗೆ ಧನ್ಯವಾದ

ನ್ಯೂಯಾರ್ಕ್: ಭಾರತಕ್ಕೆ ಅಧ್ಯಕ್ಷತೆ ಹಸ್ತಾಂತರವಾದ ಬಳಿಕ ವಿಶ್ವಸಂಸ್ಥೆಯಲ್ಲಿನ ಭಾರತದ ಪ್ರತಿನಿಧಿ ಟಿ.ಎಸ್. ತಿರುಮೂರ್ತಿ ಅವರು ಫ್ರಾನ್ಸ್‌ಗೆ ಧನ್ಯವಾದ ತಿಳಿಸಿದ್ದಾರೆ. ಯುಎನ್‌ಎಸ್‌ಸಿ ಕಾಯಂ ಸದಸ್ಯ ರಾಷ್ಟ್ರವಾಗಿರುವ ಫ್ರಾನ್ಸ್, ಭಾರತಕ್ಕೆ ನೇತೃತ್ವ ನೀಡುವಂತೆ ಒತ್ತಾಯಿಸಿತ್ತು. ಭಾರತದ ನೇತೃತ್ವದ ಸಭೆಗಳ ಬಗ್ಗೆ ಮಾಹಿತಿ ನೀಡಿರುವ ತಿರುಮೂರ್ತಿ ಅವರು, ವಿಶ್ವಸಂಸ್ಥೆಯ ಶಾಂತಿದೂತರ ಸ್ಮರಣಾರ್ಥ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳುವ ಘೋಷಣೆ ಮಾಡಿದ್ದಾರೆ. ಜತೆಗೆ, ಸಿರಿಯಾ, ಇರಾಕ್, ಯೆಮೆನ್‌ನಲ್ಲಿ ಶಾಂತಿಸ್ಥಾಪನೆ ಸಂಬಂಧ ಕೂಡ ಸಭೆಗಳನ್ನು ನಡೆಸುವ ಸುಳಿವು ಕೊಟ್ಟಿದ್ದಾರೆ.

ಫ್ರಾನ್ಸ್ ಬಳಿಕ ಭಾರತಕ್ಕೆ ಯುಎನ್‌ಎಸ್‌ಸಿ ಅಧ್ಯಕ್ಷತೆ ಸಿಕ್ಕಿರುವುದು ಬಹಳ ಸಂತಸ ತಂದಿದೆ. ಭಾರತದ ಕಾರ್ಯತಂತ್ರದ ಜತೆಗೆ ಕೈಜೋಡಿಸುವುದು ನಮ್ಮ ಬದ್ಧತೆಯಾಗಿದೆ. ಜ್ವಲಂತ ಬಿಕ್ಕಟ್ಟುಗಳ ಶಮನಕ್ಕೆ ಆದ್ಯತೆ ನೀಡಲಿದ್ದೇವೆ.

-ಎಮ್ಯಾನುಯೆಲ್ ಲೆನಾಯಿನ್
ವಿಶ್ವಸಂಸ್ಥೆಯಲ್ಲಿನ ಫ್ರಾನ್ಸ್ ಪ್ರತಿನಿಧಿ

ಭಾರತ ಮೊದಲಿನಿಂದಲೂ ಅಂತಾರಾಷ್ಟ್ರೀಯ ಕಾನೂನುಗಳನ್ನು ಗೌರವಿಸುತ್ತ ಬಂದಿದೆ. ಅಲ್ಲದೇ, ಕ್ಲಿಷ್ಟಕರ ಸಮಸ್ಯೆಗಳ ಪರಿಹಾರಕ್ಕೆ ಮಾತುಕತೆಯೇ ಉತ್ತಮ ಮಾರ್ಗ ಎಂಬುದಾಗಿ ನಂಬಿಕೊಂಡಿದೆ.

-ಎಸ್.ಜೈಶಂಕರ್
ವಿದೇಶಾಂಗ ವ್ಯವಹಾರಗಳ ಸಚಿವ

ಮಂಡಳಿ ಸದಸ್ಯತ್ವವು 2021ರ ಜ.1ರಿಂದ ಭಾರತಕ್ಕೆ ಲಭಿಸಿದೆ. ಹೆಚ್ಚು ಒತ್ತು ನೀಡಲು ಭಾರತ ನಿರ್ಧರಿಸಿದೆ. ಪ್ರಮುಖ

ಸಾಂಕ್ರಾಮಿಕದಿಂದಾಗಿ ಪರಿಸ್ಥಿತಿ ಇನ್ನಷ್ಟು ಹದಗೆಡಬಹುದು. ಹಾಗಾಗಿ ಶಾಲೆಗಳ ಪಠ್ಯಕ್ರಮದಲ್ಲಿ ಜೀವನ ಕೌಶಲ, ಮಾನಸಿಕ ಆರೋಗ್ಯ ವೃದ್ಧಿ, ಸ್ವಾಸ್ಥ್ಯದಂತಹ ವಿಷಯಗಳನ್ನು ಸೇರಿಸಬೇಕು,'' ಎಂದು ಮಕ್ಕಳ ಹಕ್ಕುಗಳ ಹೋರಾಟಗಾರರು ಸಲಹೆ ನೀಡಿದ್ದಾರೆ.

- **4046:** ಪರೀಕ್ಷೆಯಲ್ಲಿ ಫೇಲ್ ಆಗಿದ್ದಕ್ಕೆ
- **639:** ಮದುವೆಗೆ ಸಂಬಂಧಿಸಿದ ಸಮಸ್ಯೆಗಳು
- **3,315:** ಪ್ರೇಮ ಪ್ರಕರಣಗಳಿಂದಾಗಿ ಆತ್ಮಹತ್ಯೆ
- **2,567:** ಅನಾರೋಗ್ಯದ ಕಾರಣ
- **81:** ದೈಹಿಕ ಹಿಂಸೆಯಿಂದ ಬೇಸತ್ತು ಸಾವು

ನೀವು ಹಾಕಿಸಿಕೊಂಡಿದ್ದು ಜುಲೈನಲ್ಲೇ ಅಲ್ಲವೆ ಎಂದ ಸಚಿವ

ಜುಲೈ ಕಳೆಯಿತು, ಲಸಿಕೆ ಎಲ್ಲಿ? ಕೇಂದ್ರ ಸರಕಾರಕ್ಕೆ ರಾಹುಲ್ ಪ್ರಶ್ನೆ

ಹೊಸದಿಲ್ಲಿ: ಕೊರೊನಾ ನಿರೋಧಕ ಲಸಿಕೆ ವಿಚಾರವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಕೇಂದ್ರ ಸರಕಾರದ ನಡುವಿನ ವಾಕ್ಸಮರ ಮುಂದುವರಿದಿದೆ. ''ಲಸಿಕೆಗಳು ಎಲ್ಲಿವೆ? ಜುಲೈ ಕಳೆದರೂ ದೇಶದಲ್ಲಿ ಲಸಿಕೆಗಳ ಅಭಾವ ಮಾತ್ರ ಹೋಗಿಲ್ಲ,'' ಎಂದು ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ. ಅದಕ್ಕೆ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಂಡಾವೀಯ ಅವರು, ''ನೀವೂ ಜುಲೈ ತಿಂಗಳಲ್ಲೇ ಲಸಿಕೆ ಪಡೆದಿದ್ದೀರಿ ಎಂಬುದಾಗಿ ಕೇಳಿದ್ದೇನೆ. ಅದು ನಿಜವೆ?'' ಎಂದು ಪ್ರಶ್ನಿಸಿದ್ದಾರೆ.

''ಜುಲೈ ತಿಂಗಳಲ್ಲಿ ದೇಶಾದ್ಯಂತ 13 ಕೋಟಿ ಡೋಸ್ ಲಸಿಕೆಯನ್ನು ದೇಶದ ಜನರಿಗೆ ನೀಡಲಾಗಿದೆ. ಆ ಪೈಕಿ ನೀವೂ ಒಬ್ಬರು ಎಂಬುದು ತಿಳಿದುಬಂದಿದೆ. ಆದರೆ ವಿಜ್ಞಾನಿಗಳ ಸಾಧನೆ ಬಗ್ಗೆ ಮಾತ್ರ ಒಂದೇ ಒಂದು ಪ್ರಶಂಸೆಯ ಮಾತುಗಳು ನಿಮ್ಮಿಂದ ಕೇಳಿಬಂದಿಲ್ಲ. ನಿಮ್ಮ ಕ್ಷುಲ್ಲಕ ರಾಜಕಾರಣ ನಿಲ್ಲಿಸಿ. ಲಸಿಕೆಯ ಅಭಾವವಲ್ಲ, ಬದಲಿಗೆ ಪ್ರಬುದ್ಧತೆಯ ಅಭಾವ ನಿಮ್ಮಲ್ಲಿ ಕಾಣುತ್ತಿದೆ,'' ಎಂದು ಮಂಡಾವೀಯ ಕುಟುಕಿದ್ದಾರೆ. ರಾಹುಲ್ ಗಾಂಧಿ ಕಳೆದ ವಾರವಷ್ಟೇ ಲಸಿಕೆ ಹಾಕಿಸಿಕೊಂಡಿದ್ದಾರೆ.

ದೇಶಾದ್ಯಂತ ಈವರೆಗೆ 47 ಕೋಟಿ ಡೋಸ್

ಎಲ್ಲೆಲ್ಲೂ ಸೋಂಕಿನ ಆರ್ಭಟ

- ಅಮೆರಿಕದ ಫ್ಲೋರಿಡಾದಲ್ಲಿ ಸೋಂಕಿತರ ಸಂಖ್ಯೆ ದಿಢೀರ್ ಹೆಚ್ಚಳ, ನಿತ್ಯ 20 ಸಾವಿರಕ್ಕಿಂತ ಅಧಿಕ ಪ್ರಕರಣ ದಾಖಲು
- ಚೀನಾದ 18 ಪ್ರಾಂತ್ಯಗಳಲ್ಲಿ ಆವರಿಸಿದ ಡೆಲ್ಟಾ ಸೋಂಕು, ರೂಪಾಂತರಿ ವೈರಾಣು ಅಬ್ಬರಕ್ಕೆ ದೇಶದಲ್ಲಿ ತಲ್ಲಣ
- ಬ್ರಿಟನ್‌ನಲ್ಲಿ ಲಸಿಕೆ ಹಾಕಿಸಿಕೊಂಡವರಿಗೆ ಗಿಫ್ಟ್ ವೋಚರ್, ಪಿಜ್ಜಾ ದರದಲ್ಲಿ ರಿಯಾಯಿತಿ ಘೋಷಣೆ
- ಛತ್ತೀಸ್‌ಗಢದಲ್ಲಿ ಸೋಮವಾರ (ಆ.2) 10 ಮತ್ತು 12ನೇ ತರಗತಿಗಳು ಆರಂಭ
- ಕೇರಳದಿಂದ ಬರುವವರಿಗೆ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಅಥವಾ ಲಸಿಕೆ ಪ್ರಮಾಣಪತ್ರ ಕಡ್ಡಾಯಗೊಳಿಸಿದ ತಮಿಳುನಾಡು

ದೇಶದ ಕೊರೊನಾ ಮೀಟರ್

ಸೋಂಕಿತರು 3.16 ಕೋ.	ಗುಣಮುಖ 3.08 ಕೋ.	ಆ.01 ಸೋಂಕಿತರು 41,831
ಸಕ್ರಿಯ 4.05 ಲಕ್ಷ	ಸಾವು 4.24 ಲಕ್ಷ	ಗುಣಮುಖ 39,258
		ಸಾವು 541

ವಿಷವಿಕ್ಕಿ 300 ನಾಯಿಗಳ ಹತ್ಯೆ

ಹೈದರಾಬಾದ್: ಇತ್ತೀಚೆಗಷ್ಟೇ ಹಾಸನ ಜಿಲ್ಲೆಯಲ್ಲಿ 30ಕ್ಕೂ ಹೆಚ್ಚು ಮಂಗಗಳ ಮಾರಣ ಹೋಮವು ಪ್ರಾಣಿಗಳ ಮೇಲಿನ ಹಿಂಸೆಯ ಬಗ್ಗೆ ಚರ್ಚೆ ಹುಟ್ಟು ಹಾಕಿತ್ತು. ಇದರ ಬೆನ್ನಲ್ಲೇ, ಆಂಧ್ರ ಪ್ರದೇಶದ ಗೋದಾವರಿ ಜಿಲ್ಲೆಯ ಗ್ರಾಮವೊಂದರಲ್ಲಿ 300ಕ್ಕೂ ಹೆಚ್ಚು ಬೀದಿ ನಾಯಿಗಳನ್ನು ವಿಷವಿಟ್ಟು ಹತ್ಯೆ ಮಾಡಿರುವ ಆಘಾತಕಾರಿ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಲಿಂಗಪಾಲೆಂ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಗ್ರಾಮದಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿತ್ತು. ಗ್ರಾಮಸ್ಥರು ಹಲವು ಬಾರಿ ಪಂಚಾಯಿತಿಗೆ ದೂರು ನೀಡಿದ್ದರು. ಗ್ರಾಮಸ್ಥರ ಆಕ್ರೋಶ ಹೆಚ್ಚಾಗುತ್ತಿದ್ದಂತೆ ಪಂಚಾಯತ್ ಸಿಬ್ಬಂದಿ ಬೀದಿ ನಾಯಿಗೆ ವಿಷವುಣಿಸಿ ಕೊಂದಿದ್ದಾರೆ. ಬಳಿಕ ಹೊಂಡದಲ್ಲಿ ಹೂತು ಹಾಕಿದ್ದಾರೆ ಎಂದು ಪ್ರಾಣಿ ದಯಾ ಸಂಘದ ಲಲಿತಾ ಆರೋಪಿಸಿದ್ದಾರೆ. ಈ ಕುರಿತು ಅವರು ಧರ್ಮಾಜಿಗೂಡೆಂ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಗ್ರಾಮ ಪಂಚಾಯತ್ ಅಧ್ಯಕ್ಷ, ಕಾರ್ಯದರ್ಶಿ ಸೇರಿದಂತೆ ಹಲವು ಸಿಬ್ಬಂದಿಗಳ ವಿರುದ್ಧ ದೂರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ನೋಂದಾಯಿತ ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
ಮುಖ್ಯ ಅಭಿಯಂತರರ ಕಚೇರಿ (ತ್ಯಾನೀನಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-09					
1	ಎಸ್‌ಟಿಪಿ-ಕೆ.ವ್ಯಾಲಿ	ಬೆಂಜಮಂ/ಅಮುಅ(ತ್ಯಾನೀನಿ)-3/ಪಿಬಿ/131/2021-22 ದಿನಾಂಕ: 29.07.2021	19,45,944/- 48,649/-	09.08.2021ರ ಸಂಜೆ 4.00 ಗಂಟೆಯವರೆಗೆ	10.08.2021ರ ಸಂಜೆ 4.05 ಗಂಟೆಗೆ
2		ಬೆಂಜಮಂ/ಅಮುಅ(ತ್ಯಾನೀನಿ)-3/ಪಿಬಿ/133/2021-22 ದಿನಾಂಕ: 29.07.2021	62,54,000/- 1,56,350/-		
ಸಹಿ/-ಅಪರ ಮುಖ್ಯ ಅಭಿಯಂತರರು (ತ್ಯಾನೀನಿ-3) ಎಸ್‌ಟಿಪಿ-ಕೆ.ವ್ಯಾಲಿ					
3	ಎಸ್‌ಟಿಪಿ-ವಿ.ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ)ವಿ.ವಿ/ಪಿಬಿ/347/2021-22 ದಿನಾಂಕ: 28.07.2021	9,91,077/- 24,800/-	16.08.2021ರ ಸಂಜೆ 5.30 ಗಂಟೆಯವರೆಗೆ	18.08.2021ರ ಸಂಜೆ 4.00 ಗಂಟೆಯ ನಂತರ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಎಸ್‌ಟಿಪಿ-ವಿ.ವ್ಯಾಲಿ)					
4	ಎಸ್‌ಟಿಪಿ-ಎ.ವ್ಯಾಲಿ	ಬೆಂಜಮಂ/ಇಎಸ್‌ಎಟಿಇ/ತಾಂ.ಅ/234/2021-22 ದಿನಾಂಕ: 29.07.2021	44,75,652/- 89,600/-	16.08.2021ರ ಸಂಜೆ 4.00 ಗಂಟೆಯವರೆಗೆ	18.08.2021ರ ಬೆಳಿಗ್ಗೆ 11.00 ಗಂಟೆಯ ನಂತರ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಎಸ್‌ಟಿಪಿ-ಎ.ವ್ಯಾಲಿ)					
ಮುಖ್ಯ ಅಭಿಯಂತರರ ಕಚೇರಿ (ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-09					
5	ಗುಣ ಆಶ್ವಾಸನೆ	ಬೆಂಜಮಂ/ಇಕ್ಯೂಎಟಿಇ/ಪಿಬಿ/08-2021/321/2021-22 ದಿನಾಂಕ: 27.07.2021	41,22,260/- 1,03,100/-	09.08.2021ರ ಸಂಜೆ 4.00 ಗಂಟೆಯವರೆಗೆ	11.08.2021ರ ಮಧ್ಯಾಹ್ನ 12.00 ಗಂಟೆಗೆ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಗುಣ ಆಶ್ವಾಸನೆ)					
6	ಕೇಂದ್ರ ಉಗ್ರಾಣ	ಬೆಂಜಮಂ/ಕಾನಿಅ(ಕೇಂ.ಉ)/ಸಕಾನಿಅ/ಸಉಅ/ಸಅ/ಉಗ್ರಾಣ/234/2021-22, ದಿನಾಂಕ: 29.07.2021	96,64,200/- 1,93,300/-	21.08.2021ರ ಸಂಜೆ 4.00 ಗಂಟೆಯೊಳಗೆ	23.08.2021ರ ಮಧ್ಯಾಹ್ನ 12.00 ಗಂಟೆಗೆ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ ಉಗ್ರಾಣ)					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಹೆಚ್ಚಿನ ವಿವರಗಳನ್ನು https://eproc.karnataka.gov.in ಗೆ ಲಾಗಿನ್ ಆಗಿಯೂ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/DDU/YC/1003/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಕಂದಾಯ ಇಲಾಖೆ
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಾರ್ಯಾಲಯ,
ಐ.ಎಂ.ಎ., ಹಾಗೂ ಇತರೆ ವಂಚನೆ ಪ್ರಕರಣಗಳು,
3ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ ಗೋಪುರ, ಅಂಬೇಡ್ಕರ್ ವೀದಿ, ಬೆಂಗಳೂರು-01

ನಂ. SPLOCA/IMA/REC(AUCT)/5/2021 ದಿನಾಂಕ : 31-07-2021

ಹರಾಜು ಇಸ್ತಿಹಾರ್

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ, ಐ.ಎಂ.ಎ ಹಾಗೂ ಇತರೆ ವಂಚನೆ ಪ್ರಕರಣಗಳು, ವತಿಯಿಂದ ಐ.ಎಂ.ಎ ಹಾಗೂ ಅವರ ಅಂಗಸಂಸ್ಥೆಗಳ ವಂಚನೆ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ವಿವಿಧ ಕಡೆ ದಾಸ್ತಾನು ಮಾಡಲಾಗಿರುವ ಒಟ್ಟು ರೂ. 1,56,62,328/- ಮೌಲ್ಯವುಳ್ಳ ಪೀಠೋಪಕರಣಗಳು, ಎಲೆಕ್ಟ್ರಾನಿಕ್ ವಸ್ತುಗಳು ಹಾಗೂ ಇತರೆ ಚರಾಸ್ತಿಗಳನ್ನು ಹಾಗೂ ರೂ. 1,82,64,850/- ಮೌಲ್ಯವುಳ್ಳ ವಾಹನಗಳನ್ನು ಇ-ಹರಾಜು ಮಾಡಲು ನಿರ್ಧರಿಸಲಾಗಿದೆ. ಆಸಕ್ತರು ವೆಬ್‌ಸೈಟ್ http://mstcindia.co.in ಇಲ್ಲಿ ಪ್ರಕಟಿಸಿದಂತೆ ಎಲ್ಲಾ ಷರತ್ತುಗಳನ್ವಯ ವಿವರಗಳನ್ನು ಖಚಿತಪಡಿಸಿಕೊಂಡು ಇ-ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

ಇ-ಹರಾಜು ಪ್ರಕ್ರಿಯೆ ವೇಳಾಪಟ್ಟಿ

(1) ಇ-ಹರಾಜು ಅಧಿಸೂಚನೆಯ ದಿನಾಂಕ : 02-08-2021 (2) ಇ.ಎಂ.ಡಿ ಮೊತ್ತವನ್ನು ಸಲ್ಲಿಸಲು ಕೊನೆಯ ದಿನಾಂಕ : 12-08-2021ರ ಅಪರಾಹ್ನ 12.00 ಗಂಟೆಯವರೆಗೆ (3) ಚರಾಸ್ತಿಗಳು & ವಾಹನಗಳ ಭೌತಿಕ ಪರಿಶೀಲನೆ ಹಾಗೂ ಇ-ಹರಾಜು ನಡೆಸಲು ನಿಗಧಿಪಡಿಸಿರುವ ದಿನಾಂಕ : 10-08-2021 ರಿಂದ ದಿನಾಂಕ : 12-08-2021

ವಿಶೇಷ ಸೂಚನೆ : ದಿನಾಂಕ : 10-08-2021 ರಿಂದ ದಿನಾಂಕ : 12-08-2021 ರವರೆಗೆ ಚರಾಸ್ತಿಗಳ ಭೌತಿಕ ಪರಿಶೀಲನೆ ನಡೆಸಲು ನಿಗಧಿಪಡಿಸಿದ ದಿನಾಂಕಗಳಲ್ಲಿ, ಚರಾಸ್ತಿಗಳು ಹಾಗೂ ವಾಹನಗಳನ್ನು ಭೌತಿಕವಾಗಿ ಪರಿಶೀಲನೆ ನಡೆಸಲು, ಹಣ ಸ್ವೀಕೃತಿಗೆ ಸಂಬಂಧಿಸಿದಂತೆ ಬ್ಯಾಂಕ್ ಕೌಂಟರ್, ಹಾಗೂ ಇ-ಹರಾಜಿಗೆ ಸಂಬಂಧಿಸಿದಂತೆ ನೋಂದಣಿ ಮಾಡಿಕೊಳ್ಳಲು ಹಾಗೂ ಬಿಡ್‌ನ್ನು ಸಲ್ಲಿಸಲು ನೆರವಾಗಲು ನಂ. 05 ಐ.ಎಂ.ಎ ಜ್ಯುವೆಲ್ಸ್, ಲೇಡಿ ಕರ್ಜನ್ ರಸ್ತೆ, ಶಿವಾಜಿನಗರ, ಬೆಂಗಳೂರು ಕಟ್ಟಡದಲ್ಲಿ ಸಹಾಯ ಕೇಂದ್ರವನ್ನು ತೆರೆಯಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ ಗೋಪುರ, ಬೆಂಗಳೂರು-01 ಇಲ್ಲಿ ಸಂಪರ್ಕಿಸಬಹುದು. ಸಹಾಯವಾಣಿ ಸಂಖ್ಯೆ : 080-46885959, 080-26565353, 080-29566556, 080-29604556, 8660519889.

ಸಹಿ/-
ಹರಾಜು ಆಹ್ವಾನಿಸುವ ಪ್ರಾಧಿಕಾರಿ,
ಐ.ಎಂ.ಎ ವಂಚನೆ ಪ್ರಕರಣ, ಬೆಂಗಳೂರು

ವಾ.ಸಂ.ಇ/ಬೆಂ.ನಗರ/RO. No. 1013/2021-22

ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ
ಸಿಐಎನ್: U85110KA1970SGC001919

ಸಂಖ್ಯೆ: KPCL/2021-22/PS/WORK_INDENT 11150/CALL-2 ದಿನಾಂಕ: 29.07.2021

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಅರ್ಹ ಗುತ್ತಿಗೆದಾರರಿಂದ **Carrying out Operation, Preventive and break down maintenance and overhauling woks of U# 1,2 and 3 fire protection system, fire alarm and detection system at BTPS** ಕಾಮಗಾರಿಗೆ ದ್ವಿ-ಲಕೋಟೆ ಪದ್ಧತಿಯನ್ವಯ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರಿಗಿಟ್ಟ ಅಂದಾಜು ಮೊತ್ತ: ರೂ. 1,79,30,678.5/-. ಇ.ಎಂ.ಡಿ: ಇಲ್ಲ. ಕಾಮಗಾರಿ ಪೂರ್ಣಗೊಳಿಸಲು ನಿಗದಿ ಪಡಿಸಿದ ಅವಧಿ: 24 ತಿಂಗಳು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 16.08.2021, 17:30 ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ www.eproc.karnataka.gov.in ವೆಬ್‌ಸೈಟ್‌ನ್ನು ನೋಡಬಹುದು. ಯಾವುದೇ ಸ್ಪಷ್ಟೀಕರಣಕ್ಕಾಗಿ ಕಾರ್ಯನಿರ್ವಾಹಕ ಅಭಿಯಂತರರು(ಸುರಕ್ಷತೆ), ಬಿಟಿಪಿಎಸ್, ಕೆಪಿಸಿಎಲ್, ಕುಡತಿನಿ-583152, ಬಳ್ಳಾರಿ ಜಿಲ್ಲೆ, ಇವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಮೊಬೈಲ್ ಸಂಖ್ಯೆ: 94482 90770.

ಕರ್ನಾಟಕ ಸರ್ಕಾರ (**ಲೋಕೋಪಯೋಗಿ ಇಲಾಖೆ**)
ಕಾರ್ಯನಿರ್ವಾಹಕ ಇಂಜನಿಯರ್‌ರವರ ಕಾರ್ಯಾಲಯ,
ಲೋಕೋಪಯೋಗಿ ಇಲಾಖೆ. ಕೊಡಗು ವಿಭಾಗ. ಮಡಿಕೇರಿ.

ಸಂ.ಕಾ.ನಿ.ಇ/ಲೋಇ/ಕೊವಿ/ಮಡಿಕೇರಿ/ಟೆಂಡರ್/2021-22/1417-25 ದಿನಾಂಕ: 30.07.2021

ಇ-ಟೆಂಡರ್ ಮುಂದೂಡಿಕೆ ಪ್ರಕಟಣೆ -2

ಉಲ್ಲೇಖ: 1. ಟೆಂಡರ್ ಪ್ರಕಟಣೆ ಸಂಖ್ಯೆ :08/2021-22/1116-25 ದಿನಾಂಕ: 08-07-2021
2. ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ-1 :1270-79/2021-22 ದಿನಾಂಕ: 19-07-2021

ಲೋಕೋಪಯೋಗಿ ಇಲಾಖೆ ಕೊಡಗು ವಿಭಾಗ ವ್ಯಾಪ್ತಿಯ ಉಲ್ಲೇಖಿತ ಪತ್ರದಲ್ಲಿ ಪ್ರಕಟಣೆಗೊಂಡಿದ್ದ 2021-22ನೇ ಸಾಲಿನ ಲೆಕ್ಕ ಶೀರ್ಷಿಕೆ: 3054-03-337-0-05-200 ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ ಸೋಮವಾರಪೇಟೆ ತಾಲ್ಲೂಕಿನ 02 ಕಾಮಗಾರಿಗಳು ತಾಂತ್ರಿಕ ಕಾರಣಗಳಿಂದಾಗಿ ಮುಂದೂಡಿಕೆ ಮಾಡಿ ದಿನಾಂಕವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

ಪೂರ್ವಭಾವಿ ಸಭೆ	06-08-2021	11 : 00 : 00
ಟೆಂಡರ್ ಸಲ್ಲಿಸುವ ದಿನಾಂಕ	07-08-2021	16 : 00 : 00
ಟೆಂಡರ್ ತೆರೆಯುವ ದಿನಾಂಕ	09-08-2021	11 : 00 : 00

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. (ದೂರವಾಣಿ ಸಂ: 08272-225645)

ಸಹಿ/- ಕಾರ್ಯನಿರ್ವಾಹ ಇಂಜನಿಯರ್,
ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ.